**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1480/2022**

**ಚಾ.ಸಾ. - 09**
**ಪ್ರಾ.ಸಾ. - 06**

**ಸಾಕ್ಷಿದಾರರ ಹೆಸರು** ಃ ಈರಣ್ಣ ಮಲ್ಲಪ್ಪ ಫಕ್ಕಿರಣ್ಣನವರ

**ಸಾಕ್ಷಿದಾರರ ವಯಸ್ಸು** ಃ 35 ವರ್ಷ

**ಸಾಕ್ಷಿದಾರರ ಉದ್ಯೋಗ** ಃ ವ್ಯವಸಾಯ

**ಸಾಕ್ಷಿದಾರರ ವಿಳಾಸ** ಃ ನಯಾನಗರ

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 29-11-2023**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ಮೃತ ಮಹಾಂತೇಶ ನನ್ನ ಮಾವ. ಸದರಿಯವರು ಈಗ 2 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ನಂತರ ವಿಷಯ ತಿಳಿದು ನಾನು ಬೆಳಗಾವಿ ಆಸ್ಪತ್ರೆಗೆ ಹೋಗಿರುತ್ತೇನಬೆ. ಅಲ್ಲಿಂದ ಅವರನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಿಸಿದ್ದು ನಂತರ ಚಿಕಿತ್ಸೆ ಫಲಕಾರಿಯಾಗದೆ ತೀರಿಕೊಂಡಿರುತ್ತಾರೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿ ನಿಂದ ಆಗಿರುತ್ತಾದೆ ಎಂದು ನನಗೆ ಗೊತ್ತಿಲ್ಲ. ಘಟನೆ ಕುರಿತು ಹೆಚ್ಚಿನ ಮಾಹಿತಿ ಇರುವದಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಎಪಿಪಿ ಅವರಿಂದ**

ದಿನಾಂಕ 08-03-2022 ರಂದು ಸಂಜೆ 5.00 ಗಂಟೆಯ ಸುಮಾರಿಗೆ ಆರೋಪಿಯು ಬೆಳವಡಿ ಬೈಲಹೊಂಗಲ ರಸ್ತೆಯ ಮೇಲೆ ಖಂಡೋಜಿ ಹೊಲದ ಹತ್ತಿರ ತನ್ನ ಮೋಟರ ಸೈಕಲ ನಂಬರ ಕೆಎ 24 ಎಕ್ಸ 9158 ರ ಮೇಲೆ ಮೃತ ಮಹಾಂತೇಶ ಈತನನ್ನು ಕುರಿಸಿಕೊಂಡು ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ ರಸ್ತೆಯ ಪಕ್ಕದಲ್ಲಿ ಇರುವ ಗೂಟಕಲ್ಲಿಗೆ ಹಾಯಿಸಿ ಅಪಘಾತ ಪಡಿಸಿರುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದು ಸರಿಯಲ್ಲ. ಸದರಿ ಅಪಘಾತದಲ್ಲಿ ಮಹಾಂತೇಶ ಈತನಿಗೆ ತಲೆಗೆ, ಕಿವಿಗೇ ಮತ್ತು ಇತರ ಭಾಗಗಳಿಗೆ ಭಾರಿ ಪೆಟ್ಟಾಗಿದ್ದು ಆಸ್ಪತ್ರೆಗೆ

ದಾಖಲಿಸಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕಿಮ್ಸ್ ಆಸ್ಪತ್ರೆಯಲ್ಲಿ ಮಹಾಂತೇಶ ಈತನು ಮೃತ ಪಟ್ಟಿದ್ದು ದಿನಾಂಕ 10-03-2022 ರಂದು ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು. ಆರೋಪಿಯು ಪರಿಚಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೇ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>

ಆರೋಪಿತರ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ